## ಕಳೆದ ಸಂಚಿಕೆಯಲ್ಲಿ



ಠಾಣೆಗೆ ಕರೆಸಿಕೊಂಡ ಎಸ್.ಪಿ. ಸಾಹೇಬರಿಗೆ ಅಮ್ಮುವಿನ ಕೊಲೆಗೆ ಸಂಬಂಧಿಸಿದ ಸಂಪೂರ್ಣ ತನಿಖೆಯ ಫಲಶ್ರುತಿಯನ್ನು ತನಿಖಾಧಿಕಾರಿ ಮಾಯಣ್ಣ ವಿವರಿಸತೊಡಗಿದ್ದ. ಪ್ರಮುಖ ಆರೋಪಿಗಳೆಲ್ಲರನ್ನೂ ಒಬ್ಬೊಬ್ಬರನ್ನಾಗಿ ಸಕಾರಣವಾಗಿ ಆರೋಪಮುಕ್ತಗೊಳಿಸತೊಡಗಿದ. ಚಂದ್ರನ್, ಜಯಂತ್ ಸೇರಿದಂತೆ ಎಲ್ಲರನ್ನೂ ಆರೋಪಮುಕ್ತರೆಂದು ಮಾಯಣ್ಣ ಹೇಳಿದಾಗ, ಅಲ್ಲಿ ಸೇರಿದ್ದವರೆಲ್ಲ ಅಚ್ಚರಿಗೊಂಡರು. ಬೆಟ್ಟ ಅಗೆದು ಇಲಿಯೂ ದೊರೆಯದ ಸ್ಥಿತಿ ಎದುರಾಯಿತೆ ಎಂದು ಎಲ್ಲರೂ ನಿಟ್ಟುಸಿರುಬಿಡುವಾಗ, ಮಾಯಣ್ಣ ಪ್ರಯೋಗಾಲಯಕ್ಕೆ ಕಳುಹಿಸಿದ್ದ ವರದಿ ಇ-ಮೇಲ್‌ಗೆ ಬಂತು. ಅಮ್ಮು ಮನೆಯಲ್ಲಿ ಪತ್ತೆಯಾದ ನೇಲ್ ಕಟ್ಟರ್ ಕೊಲೆಗಾರನ ಸುಳಿವು ಬಿಟ್ಟುಕೊಟ್ಟಿತ್ತು. ಜಯಂತನ ಫ್ಯಾಕ್ಟರಿಯ ನೌಕರ ಮುರುಗನ್ ಮುಖವಾಡವನ್ನು ಮಾಯಣ್ಣ ಬಯಲು ಮಾಡಿದ್ದ. ಮುರುಗನ್ ಮೇಲೆ ಅನುಮಾನ ಬಂದು, ಅವನ ಹಿಂದೆ ಬಿದ್ದಿದ್ದ ಮಾಯಣ್ಣನ ಪತ್ತೆದಾರಿಕೆ ಯಶಸ್ವಿಯಾಗಿತ್ತು.

ಅವಗಣಿಸಿ ಮೈಮರೆಯುವ ಸಾಧ್ಯತೆಗಳು ಹೆಚ್ಚು. ಆ ಅವಕಾಶಕ್ಕಾಗಿ ತಾಳ್ಮೆಯಿಂದ ಕಾದು ಅವನ ಮೇಲೆ ಮುಗಿಬಿದ್ದು ಹಣಿಯಬೇಕೆಂದುಕೊಂಡ ಮಾಯಣ್ಣ.

ದೊಡ್ಡ ಗಾಜಿನ ಲೋಟಕ್ಕೆ ಅರ್ಧದಷ್ಟು ರಮ್ ಸುರಿದು, ಇನ್ನೊಂದು ಜೇಬಿನಿಂದ ನೀರಿನ ಬಾಟಲ್ ತೆಗೆದು ಲೋಟ ತುಂಬಿಸಿ, 'ಚಿಯರ್ಸ್ ಮಾಯಣ್ಣ. ನಿನ್ನ ಇನ್ನ ಒನ್ ಅವರ್ ಲೈಫ್‌ಗೆ. ಓಕೆ..., ಪ್ರೋಗ್ರಾಮ್ ಯೇಳ್ತೀನಿ, ಕೇಳು...'

ಅದಕ್ಕೆ ಮುಂಚೆ ಅರ್ಧ ಲೋಟ ಒಂದೇ ಗುಟುಕಿಗೆ ಗಂಟಲೊಳಗೆ ಸುರಿದುಕೊಂಡಿದ್ದನ್ನು ನೋಡಿ ಮಾಯಣ್ಣನಿಗೆ ಅನಿಸಿತ್ತು. ಇವನು ಪಳಗಿದ ಹಳೇ ಕುಡುಕ ಎಂದು. ಪಕ್ಕದಲ್ಲಿದ್ದ ಒಂದು ವಡೆ ಎತ್ತಿ ಕಚ್ಚಿಕೊಂಡ ಮುರುಗನ್.

'ಈಗ ಕೇಳು ಮಾಯಣ್ಣ. ಇನ್ನು ಒನ್ ಅವರ್ ಅಷ್ಟೇ, ವೇಲು ಅವನ ಕಾರ್ಗೊ ಆಟೊನಲ್ಲಿ ಬರ್ತಾನೆ. ಅವನೇ ಈ ಸ್ವಿಚ್ ಲಾಂಗ್ ಪ್ರೆಸ್ ಮಾಡಿ ನಿನ್ನ ಲೈಫ್‌ಗೆ ಫೈನಲ್ ಟಚ್ ಕೊಡಾದು. ಆಮೇಲೆ ಕಾರ್ಗೊ ಆಟೊದಲ್ಲಿ ನಾನು ಮತ್ತೆ ವೇಲು, ನಿನ್ನ ಬಾಡಿ ತಗೊಂಡು ಅಲ್ಲಿ ಗೊಲ್ಲಳ್ಳಿ ಕೆರೆಗೆ ಮಣ್ಣು ತುಂಬಿ ಲೇಔಟ್ ಮಾಡ್ತಾ ಅವ್ರಲ್ಲ. ಅಲ್ಲಿ, ಜೋಸೆಫ್ ಸೈಟ್ ಪಕ್ಕದಲ್ಲಿ ನಿನಗೂ ತ್ರೀ ಬೈ ಸಿಕ್ಸ್ ಸೈಟು ಅಲಾಟ್ ಮಾಡಿ, ನಾವು ವಾಪಸ್ ಬರ್ತೀವಿ... ಮ್ಯಾಟರ್ ಕ್ಲೋಸ್..... ಎಂಗೆ...'

ಮಿಕ್ಕ ಇನ್ನರ್ಧ ಲೋಟವನ್ನೂ ಒಮ್ಮೆಗೆ ಒಳಗೆ ಸುರಿದುಕೊಂಡು ಕಣ್ಣಗಲಿಸಿ ಮಾಯಣ್ಣನನ್ನು ನಿಟ್ಟಿಸುತ್ತಾ, ಎಡಗೈಯಲ್ಲಿ ಲೋಟ ಎತ್ತಿ, ಬಲಗೈ ತೋರುಬೆರಳು ಬಾಗಿಸಿ, ಮೆಲ್ಲಗೆ ಲೋಟವನ್ನು ಬಡಿಯತೊಡಗಿದ.

'ಮಾಯಣ್ಣ ಇದು ಕಿಕ್ ಕೊಡುತ್ತೆ ನಿಜ... ಆದ್ರೇ ಯೇಳ್ತೀನಿ ಕೇಳು... ನಿನ್ನಂಥ ಟಾಪ್ ಆಫೀಸರ್‌ನ್ನ ಟ್ರಾಪ್ ಮಾಡಿ, ಎದರ್ಗೆ ನಿಲ್ಲಿ, ಕೋತಿ ತರ ಆಟ ಆಡ್ಸದು ಇದ್ಯಲ್ಲಾ, ಆ ಕಿಕ್ ಮುಂದೆ ಈ ಕಿಕ್ ಏನೂ ಇಲ್ಲ...'

ಒಬ್ಬ ಪೊಲೀಸು ಅಧಿಕಾರಿಯನ್ನೇ ತನ್ನ ಚಾಲಾಕಿತನದಿಂದ ಹಳ್ಳಕ್ಕೆ ಕೆಡವಿದ ಗೆಲುವಿನಲ್ಲಿ ಸೆಟೆದು ಬೀಗುತ್ತಿರುವ ಅವನ ಅಹಂಭಾವಕ್ಕೆ ಧಕ್ಕೆಯಾಗದಂತೆ ತಾನು ಸೋತು ಹತಾಶನಾದಂತಿರಬೇಕು ಎಂದುಕೊಂಡ ಮಾಯಣ್ಣ.

'ಮುರುಗನ್, ಆಯ್ತು ಒಪ್ಕೊಂಡೆ. ಇಲ್ಲಿತನಕ ನಾನೇ ಅಂತ ಅನ್ಕೊಂಡಿದ್ದೆ. ಆದರೆ ನಿನ್ನ ಮುಂದೆ ನಾನು ಏನೂ ಅಲ್ಲ. ನನ್ನದು ಆಯ್ತು ಅನ್ಸುತ್ತೆ... ಈಗ ಹೇಳಬಹುದಲ್ಲ...'

'ಆಯಮ್ಮ ತುಂಬಾ ತಪ್ಪು ಮಾಡಿಬಿಟ್ರು ಮಾಯಣ್ಣ. ಎಲ್ಲಾ ಮ್ಯಾಟರಲ್ಲಿ ತುಂಬಾ ತಲೆ ಆಕವ್ರು. ನಾನು ಫ್ಯಾಕ್ಟರಿ ಯೆಂಗೊ ನಡಸ್ತಾಯಿದ್ದೆ. ನಮ್ಮಂತಹ ಟ್ಯಾಲೆಂಟುಗಳು ಬರೀ ಸಂಬಳಕ್ಕೆ ಕೆಲಸ ಮಾಡಕೆ ಆಗುತ್ತಾ? ಏನೋ ಅದು ಇದೂ ಎಲ್ಲಾ ಇರುತ್ತೆ. ಫ್ಯಾಕ್ಟರೀಲಿ ನಮಗೆ ರೆಸ್ಪೆಕ್ಟ್ ಇಲ್ಲದಂಗೆ ಮಾಡಿಬಿಟ್ರು...'

ಖಾಲಿಯಾದ ಲೋಟ ಮತ್ತೆ ಭರ್ತಿಯಾಗಿತ್ತು. ಮಾಯಣ್ಣನ ಲೆಕ್ಕಾಚಾರ ನಡೆದೇ ಇತ್ತು. ತಾನು ಮುರುಗನ್ ಮೇಲೆ ಎರಗಿಹೋಗಲು, ಆತ ಬಿಗಿ ಬಿಟ್ಟು ತುಸು ತುಸುವೇ ಹಗುರಾಗುತ್ತಾ ಗುರಾಣಿ ಕೆಳಗಿಳಿಸಬೇಕು. ಅವನಿಗೆ ಎಲ್ಲವೂ ತನ್ನ ಸಂಪೂರ್ಣ ಹಿಡಿತದಲ್ಲೇ ಇದೆ ಎನ್ನುವ ವಿಶ್ವಾಸ ದೃಢವಾಗುತ್ತಾ ಹೋಗುವಂತಿರಬೇಕು ಅಂದುಕೊಂಡ ಮಾಯಣ್ಣ. ನೋಡ ನೋಡುತ್ತಿದ್ದಂತೆ ಎರಡನೇ ಪೆಗ್ ಕೂಡ ಖಾಲಿಯಾಗಿ ಮೂರನೆಯದನ್ನು ತುಂಬಿಸಿದ್ದ ಮುರುಗನ್. ಅದೇನಾಯಿತೊ ಏನೊ ಏಕಾಏಕಿ ಮತ್ತೆ ಸ್ವಿಚ್ ಅದುಮಿದ್ದ ಮುರುಗನ್. ಮಾಯಣ್ಣನಿಗೆ ನಖಶಿಖಾಂತ ಬೆಂಕಿಯಲ್ಲಿ ಉರಿದಂತಾಗಿ, ಕಾಲಿನ ಕೀಲುಗಳು ಕಳಚಿ ನೆಲಕ್ಕೆ ಕುಸಿದು ಬೀಳುವಂತಾಗಿತ್ತು. ಆ ವಿದ್ಯುತ್ ಆಘಾತ ಎಷ್ಟು ತೀಕ್ಷ್ಣವಾಗಿತ್ತೆಂದರೆ ಸ್ಥಿಮಿತಕ್ಕೆ ಬರಲು ಮೂರ್ನಾಲ್ಕು ನಿಮಿಷವೇ ಬೇಕಿತ್ತು. ಏನೂ ಮಾಡಲಾಗದೆ, ಈ ವಿಕೃತ ಪ್ರಾಣಿಯ ಕೈಯಲ್ಲಿ ಯಮಯಾತನೆ ಸಹಿಸುತ್ತಾ ಸಹನೆಯಿಂದ ತನ್ನ ಅವಕಾಶಕ್ಕಾಗಿ ಕಾಯಬೇಕಿತ್ತು.

'ನಾನು ಸ್ವಲ್ಪ ಟೈಟಾದ ಮೇಲೆ ಏನಾದರೂ ಸ್ಟಂಟ್ ಮಾಡೊ ಐಡಿಯಾ ಬರಬಾರ್ದು ಅಲ್ವ ಮಾಯಣ್ಣ. ಅದಕ್ಕೆ ಅವಾಗವಾಗ ಅಲಾರಾಮ್. ಇನ್ನು ಅರ್ಧ ಗಂಟೇಲಿ ವೇಲು ಬರ್ತಾನೆ. ಅಲ್ಲೀತನಕ ಏನಾಯ್ತು ಯೇಳ್ತೀನಿ ಕೇಳು. ಎಲ್ಲಾ ಪ್ಲಾನ್ ತರಾನೇ ನಡೀತು. ಈ ಫ್ಯಾಕ್ಟರೀದು, ರಾ ಮೆಟೀರಿಯಲ್ಲು ಅಬೇಸ್ ಮಾಡಿ, ನಮ್ಮ ಸ್ವಂತ ಫ್ಯಾಕ್ಟರಿಗೆ ಆಕುದ್ವಿ... ಜೋಸೆಫ್‌ನ ನೀಟಾಗಿ ಕ್ಲೋಸ್ ಮಾಡುದ್ವಿ... ಇನ್ನೇನು ಆ ಕ್ಲೈಂಟ್ಸು ಈ ಫ್ಯಾಕ್ಟರಿಗೆ ಆರ್ಡರ್ ಕ್ಲೋಸ್ ಮಾಡಿ ನನ್ನ ಫ್ಯಾಕ್ಟರಿಗೆ ಆರ್ಡರ್ ಕೊಡ್ತಿದ್ರು. ಯಾಕಂದ್ರೆ ಬಿಡ್ಡಿಂಗಲ್ಲಿ ನಾವೇ ನೆಕ್ಸ್ಟ್ ಅಲ್ವ. ಯಾರಿಗೂ ಏನು ಡೌಟ್ ಇಲ್ದಂಗೆ ಮಾಡಿದ್ದೆ. ಇದೆಲ್ಲಾ ಆದ್ಮೇಲೆ ಜಯಂತ್ ಸಾರ್‌ಗೆ ಎಷ್ಟು ಪ್ರಾಬ್ಲಂ ಆಗ್ತಾ ಇತ್ತು ಅಂದ್ರೆ...'

ಮೂರನೇ ಪೆಗ್ ಮುಗಿಸಿ, ನಾಲ್ಕನೇ ಪೆಗ್ ರೆಡಿ ಮಾಡಿದ್ದ. ಮಧ್ಯೆ ಮಧ್ಯೆ ವಡೆ ಬಜ್ಜಿಗಳನ್ನ ಕಚಪಚ ತಿನ್ಕೊಂಡು ಮುಂದುವರಿಸಿದ್ದ ಅವನ ವೀರಗಾಥೆಯನ್ನ.

'ನಾನೇನಾದ್ರು ಕೇಳಿದ್ರೆ, ಮುರುಗನ್... ನೀನೇ ಫ್ಯಾಕ್ಟರಿ ಸಾಲ ಎಲ್ಲಾ ತೀರಿಸಿ, ನೀನೇ ಫ್ಯಾಕ್ಟರಿ ತಗೊಪ್ಪಾ, ನನಗೆ ಏನೂ ಕೊಡ್ಬೇಡ' ಅಂತಿದ್ರು... ಅಷ್ಟು ವೀಕ್ ಮಾಡಿಬಿಟ್ಟಿದ್ದೀನಿ ಅವರ ಫ್ಯಾಕ್ಟರೀನ...'

ಮುರುಗನ್ ಕಣ್ಣುಗಳು ಸ್ವಲ್ಪ ತೇಲುತ್ತಿದ್ದಂತೆ, ಕೈಗಳ ಚಲನೆ ಸ್ವಲ್ಪ ನಿಧಾನವಾದಂತೆ ಕಾಣುತ್ತಿತ್ತು. ಅವನ ಮೇಲೆ ಹಾರಿ ಹದಗಟ್ಟುವ ಗಳಿಗೆ ಹತ್ತಿರವಾಗುತ್ತಿದ್ದಂತಿತ್ತು.

'ಮಾಯಣ್ಣ, ಗೋಡೆ ಮೇಲೆ ಗಡಿಯಾರ ನೋಡು, ಈಗ ನಿನಗೆ ಲಾಸ್ಟ್ ಟ್ವೆಂಟಿ ಮಿನಿಟ್ಸ್. ಆದರೆ ನಾನು ಎಲ್ಲಿ ಯಾಮಾರಿದ್ದು ಗೊತ್ತ ಮಾಯಣ್ಣ... ಆ ಟೋಲ್ ಚೀಟಿ ಯಾವಾಗ ಅಮ್ಮು ಕೈಗೆ ಸಿಕ್ತೋ ಅವಾಗ... ಅದೇನಾದ್ರು ಜಯಂತ್ ಸಾರ್ ಕೈಗೊ, ಪೊಲೀಸ್ ಸ್ಟೇಷನ್ ಪಾಸ್ ಆಗಿದ್ರೆ, ನಾವು ಕ್ಲೋಸ್. ಜೊತೆಗೆ ಆಯಮ್ಮನ ಮೊಬೈಲಲ್ಲಿ ಆ ಟೋಲ್ ಚೀಟಿಯ ಫೋಟೊ, ಮೆಸೇಜು ಎಲ್ಲಾ. ನೀನೆ ಯೇಳು ಮಾಯಣ್ಣ, ನಾನು ಏನು ಮಾಡ್ಬೇಕು ಅಂತ...'

ಮಾತು ತುಸು ತೊದಲುತ್ತಿತ್ತು. ನಾಲ್ಕನೇ ಪೆಗ್ಗನ್ನು ನಿಧಾನವಾಗಿ ಸಣ್ಣ ಗುಟುಕುಗಳಲ್ಲಿ ಇಳಿಸುತ್ತಿದ್ದ. ಮಾಯಣ್ಣ ತನಗೆ ಇದ್ಯಾವುದರಲ್ಲೂ ಆಸಕ್ತಿ ಇಲ್ಲ, ತನ್ನ ಅಂತ್ಯಕ್ಕೆ ಆರಂಭವಾಗಿರುವ ಕ್ಷಣಗಣನೆಯೊಂದೇ ತಲೆಯಲ್ಲಿರುವುದು ಎಂಬಂತೆ, ಯಾವ ಪ್ರತಿಕ್ರಿಯೆಯನ್ನು ಕೊಡದಂತೆ, ತಲೆ ಕೆಳಗಾಕಿ, ಕೈಚೆಲ್ಲಿ ಗೋಡೆಗೆ ವರಗಿ ನಿಂತಿದ್ದಂತಿದ್ದ.

'ನೀವು ಪೊಲೀಸವರಿಗೆ, ಕೊಲೆ ಅಂದ ಮೇಲೆ ಯಾರೊ ಒಬ್ಬನ್ನ ಕೊಲೆಗಾರ ಅಂತ ತೋರಿಸಿ